ಕರ್ನಾಟಕ ಗೃಹಮಂಡಲಿ ನಿವೇಶನ ಹಂಚಿಕೆ ಬಗ್ಗೆ.

3253 - ಶ್ರೀ ಹುಚ್. ವಿಶ್ವನಾಥ್ (ಕೆ.ಆರ್.ನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ನಗರಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಇಂದಿನವರೆಗೂ ನಿರ್ಮಿಸಲಾಗಿರುವ ಗೃಹಗಳೆಷ್ಟು, ಈ ಗೃಹಗಳು ಯಾವ ಯಾವ ವರ್ಷದಲ್ಲಿ ಕಟ್ಟಲ್ಪಟ್ಟಿವೆ?

ಆ) 1989ರ ಸಾಲಿನಿಂದ ಇಂದಿನವರೆಗೂ ಹುಬ್ಬಳ್ಳಿ-ಧಾರವಾಡ ನಗರಪಾಲಿಕೆ ವ್ಯಾಪ್ತಿಯಲ್ಲಿ ಯಾವ ಯಾವ ಶ್ರೇಣಿಯ ಮನೆಗಳು ಯಾವ ಯಾವ ಸ್ಥಳಗಳಲ್ಲಿ ಕಟ್ಟಲ್ಪಟ್ಟಿವೆ?

ಇ) ಸದರಿ ಮನೆಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ್ದವರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರ ಸಂಖ್ಯೆ ಎಷ್ಟು? ಮತ್ತು ಖಾಸಗಿ ವ್ಯಕ್ತಿಗಳಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು? (ಎಲ್ಲಾ ಅರ್ಜಿದಾರರ ಹೆಸರು, ವಿಳಾಸದ ಪಟ್ಟಿಯನ್ನು ಒದಗಿಸುವುದು)

ಈ) ಸದರಿ ಮನೆಗಳು ಯಾವ ರೀತಿ ಹಂಚಿಕೆ ಮಾಡಲ್ಪಟ್ಟಿವೆ. ಈ ಹಂಚಿಕೆ ಯಾವ ಯಾವ ದಿನಾಂಕಗಳಂದು ಮಾಡಲ್ಪಟ್ಟಿದೆ?

ಉ) ಗೃಹ ಮಂಡಳಿ ಅಧ್ಯಕ್ಷರ ವಿವೇಚನಾಯುಕ್ತ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಯಾವ ವ್ಯಕ್ತಿಗಳಿಗೆ ಯಾವ ಯಾವ ಶ್ರೇಣಿಯ ಮನೆಗಳ ಹಂಚಿಕೆಯಾಗಿದೆ? (ಪ್ರತಿಯೊಬ್ಬ ಹಂಚಿಕೆದಾರರ ವಿವರ ಒದಗಿಸುವುದು)

ಊ) ಅಧ್ಯಕ್ಷರು ವಿವೇಚನಾಯುಕ್ತ ಗೃಹಗಳ ಹಂಚಿಕೆ ಅಧಿಕಾರ ನಿರ್ವಹಣೆ ಮಾಡುವಲ್ಲಿ ಅವರ ಆಪ್ತ ಸಹಾಯಕರು ವ್ಯವಹಾರ ಮಾಡಿರುವರೆ, ಹಾಗಿದ್ದಲ್ಲಿ ಅವರ ಮೇಲೆ ಇಲಾಖಾ ಕ್ರಮವನ್ನು ಕೈಗೊಳ್ಳಲಾಗುವುದೇ?

ಶ್ರೀ ಕೆ.ಜಿ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹುಬ್ಬಳ್ಳಿ-ಧಾರವಾಡ ನಗರಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿಯು ಇದುವರೆವಿಗೂ 2784 ಮನೆಗಳನ್ನು ನಿರ್ಮಿಸಿರುತ್ತದೆ. ವಿವರಗಳು ಅನುಬಂಧ (1) ರಂತೆ.

ಆ) 1989 ರಿಂದ ಇದುವರೆವಿಗೂ ಒಟ್ಟು 472 ಮನೆಗಳನ್ನು ನಿರ್ಮಿಸಿರುತ್ತದೆ. ವಿವರ ಅನುಬಂಧ (2)ರಂತೆ.

ಇ) ಮನೆಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ್ದವರ ಪೈಕಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರು ಕ್ರಮವಾಗಿ 141 ಮತ್ತು 433 ಹಾಗೂ ಖಾಸಗಿ ವ್ಯಕ್ತಿಗಳಿಂದ 736 ಅರ್ಜಿಗಳು ಬಂದಿದ್ದವು. ಇವರ ಬಗ್ಗೆ ಪಟ್ಟಿಯನ್ನು ಲಗತ್ತಿಸಲಾಗಿದೆ. ಅನುಬಂಧ-3

ಈ) ಈ ಮನೆಗಳನ್ನು ಕರ್ನಾಟಕ ಗೃಹ ಮಂಡಳಿಯ (ಹಂಚಿಕೆ) ನಿಯಮಾವಳಿ 1983ರ ಪ್ರಕಾರ (ಲಾಟರಿ) ಮೂಲಕ ದಿನಾಂಕ 30.11.90 ಮತ್ತು 10.391 ರಂದು ಹಂಚಿಕೆ ಮಾಡಲ್ಪಟ್ಟಿದೆ.

ಉ) ಹಂಚಿಕೆದಾರರ ಪಟ್ಟಿಯನ್ನು ಲಗತ್ತಿಸಲಾಗಿದೆ.

ಅನುಬಂಧ-4

ಎಂಐಜಿ-	1-5
ಎಂಐಜಿ-	2-2
ಹೆಚ್‌ಜಿ	–4

ಊ) ಇಂತಹ ಪ್ರಕರಣಗಳು ಮಂಡಳಿಯ ಅಥವಾ ಅಧ್ಯಕ್ಷರ ಗಮನಕ್ಕೆ ಬಂದಿರುವುದಿಲ್ಲ.

ಮೀಸಲಾತಿ ಪದ್ಧತಿ ಬಗ್ಗೆ.

3185 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರದಲ್ಲಿ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೆ ತರಲು ನೇಮಿಸಿರುವ ಉನ್ನತ ಮಟ್ಟದ ಸಮಿತಿಯೂ ಇದ್ದು, ಇದು ಎಷ್ಟು ಬಾರಿ ಸಭೆ ಸೇರಿ ಮೀಸಲಾತಿ ಪದ್ಧತಿ ಕಡ್ಡಾಯವಾಗಿ ಎಲ್ಲಾ ಇಲಾಖೆಯಲ್ಲಿಯೂ ಜಾರಿಗೊಳಿಸಲಾಗಿದೆಯೇ, ಕಳೆದ ಮೂರು ವರ್ಷಗಳ ಬಡ್ತಿಗಳ ವಿವರಗಳನ್ನು ಒದಗಿಸುವುದು.*

ಆ) *ದೋಸ್ಸರ್ ಕಡ್ಡಾಯ ಜಾರಿಗೊಳಿಸಿದ ಇಲಾಖೆಗಳ ಮೇಲೆ ಕ್ರಮ ಕೈಗೊಂಡಿರುವಿರಾ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಸರ್ಕಾರದ ಮೀಸಲಾತಿ ಪಾಲನೆಯನ್ನು ಗಮನಿಸಲು ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯಿದ್ದು, ಅಗತ್ಯಕ್ಕೆ ತಕ್ಕಂತೆ ಈ ಸಮಿತಿಯನ್ನು ಆಗಿಂದಾಗ್ಗೆ ಪುನರ್ ರಚಿಸಲಾಗುತ್ತಿದೆ. ದಿನಾಂಕ 7-1-1991ರಂದು ಹೊಸ ಸಮಿತಿ ರಚಿತವಾಗಿದ್ದು, ಈ ಸಮಿತಿ ಈವರೆಗೆ ಸಭೆ ಸೇರಿರುವುದಿಲ್ಲ. ಎಲ್ಲಾ ಇಲಾಖೆಗಳೂ ಸರ್ಕಾರದ ಮೀಸಲಾತಿ ನೀತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಸರ್ಕಾರದ ಎಲ್ಲಾ ಇಲಾಖೆಗಳಲ್ಲಿನ ವಿವಿಧ ಹುದ್ದೆಗಳಲ್ಲಿ ಕಳೆದ 3 ವರ್ಷಗಳಿಂದ ಮಾಡಲಾದ ಬಡ್ತಿ ವಿವರಗಳ ಮಾಹಿತಿ ಲಭ್ಯವಿಲ್ಲ.

ಆ) ಇಂತಹಾ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಸ್ವಾತಂತ್ರ್ಯ ಹೋರಾಟಗಾರರ ಮಾಸಿಕ ಪರಿಷ್ಕಾರದ ಬಗ್ಗೆ.

3251 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸ್ವಾತಂತ್ರ್ಯ ಹೋರಾಟಗಾರರ ಮಾಸಿಕ ಪರಿಹಾರವನ್ನು ಕೋರಿ ಬಂದಿರುವ ಅರ್ಜಿಗಳೆಷ್ಟು, (1-1-83 ರಿಂದ 31-12-90ರ ವರೆವಿಗೆ ಬಂದಿರುವ ಅರ್ಜಿಗಳನ್ನು ವರ್ಷಾನುಕ್ರಮದಲ್ಲಿ ನೀಡುವುದು)*

ಆ) *ಅರ್ಜಿದಾರರಿಂದ ವಿಳಂಬಾಲದಲ್ಲಿ ಅವಶ್ಯ ಮಾಹಿತಿ ಪಡೆಯಲು ಮಾರ್ಗದರ್ಶನ ಸೂಚನೆಗಳನ್ನು ಬಿಡುಗಡೆ ಮಾಡಲಾಗಿತ್ತೆ?*

ಇ) *ಈವರೆಗೆ ಇನ್ನೂ ಪರಿಹಾರ ದೊರಕದಿರುವುದಕ್ಕೆ ಕಾರಣವೇನು, ಎಂದಿನಿಂದ ಪರಿಹಾರ ನೀಡಲಾಗುವುದು?*

ಈ) *60 ವರ್ಷಕ್ಕೂ ಮೀರಿದ ಹೋರಾಟಗಾರರ ಅರ್ಜಿಗಳನ್ನು ಪರಿಗಣಿಸಿ ಅವರಿಗೆ ತ್ವರಿತ ಪರಿಹಾರ ನೀಡಲು ಸರ್ಕಾರವು ವಿಶೇಷ ಗಮನ ಹರಿಸುವುದೇ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ)

ವರ್ಷ	ಬಂದಿರುವ ಅರ್ಜಿಗಳು
1983	3204
1984	1453
1985	846